# ಸತ್ಯದ ಒಂದು ಪ್ರಸಂಗ

—ಡಿ.ಕೆ. ಈರೇಗೌಡ

ಒಬ್ಬರು ಸಾಧುವಿದ್ದರು. ಅವರು ಸದ್ಗುಣಿಗಳೂ ಸಜ್ಜನರೂ ಸಕಲ ವಿದ್ಯಾಪಾರಂಗತರೂ ಆಗಿದ್ದರು. ಅವರಿಗೆ ಹನ್ನೆರಡು ಜನ ಶಿಷ್ಯರಿದ್ದರು. ಹನ್ನೆರಡು ವರ್ಷಗಳ ಕಾಲ ಅವರಿಗೆ ಸಕಲ ವಿದ್ಯೆಗಳನ್ನೂ ಬೋಧಿಸಿದರು. ಅನಂತರ ಅವರುಗಳನ್ನು ತಮ್ಮ ಊರುಗಳಿಗೆ ಹಿಂದಿರುಗುವಂತೆ ತಿಳಿಸಿ, ಸದ್ಗುಣಿಗಳಾಗಿ ಬದುಕುವಂತೆ ಹರಸಿದರು. ಆ ಶಿಷ್ಯಂದಿರು ಬೇರೆಬೇರೆ ವೃತ್ತಿಗಳನ್ನು ಅವಲಂಬಿಸಿ ಸಜ್ಜನರಾಗಿ ಬದುಕುತ್ತಿದ್ದರು. ಆದರೆ ಅವರಲ್ಲೊಬ್ಬ ಕಳ್ಳತನ ಮಾಡಿ ಜೀವನ ನಡೆಸತೊಡಗಿದ. ಹೀಗಿರಲು ಕೆಲವು ವರ್ಷಗಳು ಕಳೆದಮೇಲೆ, ಉಳಿದ ಹನ್ನೊಂದು ಜನರು ಒಮ್ಮೆ ಗುರುಗಳ ಆಶೀರ್ವಾದವನ್ನು ಪಡೆಯಬೇಕೆಂದು ಬಯಸಿ ಅವರ ಬಳಿಗೆ ಬಂದರು. ಗುರುಗಳು ಅವರನ್ನು ಆದರದಿಂದ ಬರಮಾಡಿಕೊಂಡು ಯೋಗಕ್ಷೇಮ ವಿಚಾರಿಸಿದರು, ಮತ್ತು ಇನ್ನೊಬ್ಬನೇಕೆ ಬರಲಿಲ್ಲವೆಂದು ಕೇಳಿದರು. ಶಿಷ್ಯಂದಿರು ಪರಸ್ಪರ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು, ಮೌನವಾಗಿದ್ದರು. ಗುರುಗಳು ಒತ್ತಾಯ ಮಾಡಲಾಗಿ ಅವರಲ್ಲೊಬ್ಬ ಧೈರ್ಯ ಮಾಡಿ 'ಏನು ಹೇಳುವುದು ಗುರುಗಳೆ, ಅವನೀಗ ಕಳ್ಳನಾಗಿದ್ದಾನೆ' ಎಂದನು. ಗುರುಗಳು ಸ್ವಲ್ಪ ಹೊತ್ತು ಮೌನವಾಗಿದ್ದು ಅನಂತರ ಹೀಗೆಂದರು, ' ಅವನು ಕಳ್ಳನಾಗಿದ್ದರೂ ಚಿಂತೆಯಿಲ್ಲ. ಅವನೊಮ್ಮೆ ನನ್ನನ್ನು ಬಂದು ನೋಡುವಂತೆ ತಿಳಿಸಿ' ಎಂದರು. ಆ ಹನ್ನೊಂದು ಜನರೂ ಗುರುಗಳ ಆಶೀರ್ವಾದ ಪಡೆದು ಹಿಂದಿರುಗಿದರು.

ಅವರು ಹಿಂದಿರುಗಿ ಬಂದಮೇಲೆ ಆ ಕಳ್ಳನನ್ನು ಭೇಟಿಮಾಡಿ ಗುರುಗಳ ಅಪೇಕ್ಷೆಯನ್ನು ತಿಳಿಸಿದರು. ಅದರಂತೆ ಅವನು ಗುರುಗಳನ್ನು ಭೇಟಿಮಾಡಿದನು. ಗುರುಗಳು ಅವನನ್ನು ಕಳ್ಳನೆಂದು ತಿರಸ್ಕಾರದಿಂದ ನೋಡಲಿಲ್ಲ. ಬದಲಾಗಿ ಪ್ರೀತಿಯಿಂದ ಮಾತನಾಡಿಸಿದರು. ಉಣ್ಣಲು ನೀಡಿದರು. ಕಳ್ಳನಾಗಲು ಕಾರಣವೇನೆಂದು ಕರುಣೆಯಿಂದ ಕೇಳಿದರು. ಆ ಮಾತಿಗೆ ಅವನು 'ನಾನು ಇಲ್ಲಿಂದ ಹೋದಮೇಲೆ ಏನಾದರೂ ಕಸುಬು ಹಿಡಿದು ಬದುಕಬೇಕೆಂದು ಎಲ್ಲಾ ಪ್ರಯತ್ನ ಮಾಡಿದೆ. ಆದರೆ ಎಲ್ಲೂ ಸರಿಯಾದ ಉದ್ಯೋಗ ಸಿಗಲಿಲ್ಲ. ಅನಿವಾರ್ಯವಾಗಿ ಕಳ್ಳತನ ಮಾಡಬೇಕಾಯ್ತು. ಈಗ ಸುಖವಾಗಿದ್ದೇನೆ. ಆದರೆ ಕಳ್ಳತನ ಬಿಡು ಎಂದು ಮಾತ್ರ ಹೇಳಬೇಡಿ' ಎಂದನು. ಗುರುಗಳು ಸ್ವಲ್ಪ ಹೊತ್ತು ಮೌನವಾಗಿದ್ದು 'ಆಗಲಿ, ನಿನಗೆ ನಾನು ಕಳ್ಳತನ ಬಿಡು ಎಂದು ಹೇಳುವುದಿಲ್ಲ. ಆದರೆ ನೀನು ನನಗೆ "ಗುರುಕಾಣ್ಕೆ" ಕೊಡುವುದಿಲ್ಲವೆ?' ಎಂದು ಕೇಳಿದರು. 'ಆಗಲಿ ಗುರುಗಳೆ, ನೀವು ಏನು ಕೇಳಿದರೂ ಕೊಡುತ್ತೇನೆ, ನಿಮಗೇನು ಬೇಕು ಕೇಳಿ' ಎಂದನು. ಆಗ ಗುರುಗಳು 'ಕಳ್ಳತನ ಮಾಡಿದರೂ ಸುಳ್ಳು ಹೇಳಬೇಡ. ಅದೇ ನೀನು ನನಗೆ ಕೊಡಬೇಕಾದ ಗುರುಕಾಣ್ಕೆ' ಎಂದರು. ಆಗ ಆ ಕಳ್ಳನು 'ಆಗಲಿ, ಗುರುಗಳೇ' ಎಂದು ಅವರಿಗೆ ನಮಸ್ಕಾರ ಮಾಡಿ ಅವರ ಆಶೀರ್ವಾದ ಪಡೆದು ಹೊರಟನು.

ಹೀಗಿರಲಾಗಿ ಆ ಕಳ್ಳನು ಒಮ್ಮೆ ರಾಜನ ಅರಮನೆಯಲ್ಲಿ ಕಳ್ಳತನ ಮಾಡಲು ಮಧ್ಯರಾತ್ರಿಯಲ್ಲಿ ಅಲ್ಲಿಗೆ ಹೋದನು. ಆ ದೇಶದ ರಾಜನು ಆ ದಿನ ಮಾರುವೇಷದಲ್ಲಿ ಅರಮನೆಯ ಕಾವಲುಗಾರರನ್ನು ಪರೀಕ್ಷಿಸಲು ಗಸ್ತು ತಿರುಗುತ್ತಿದ್ದನು. ಕಳ್ಳ ಬಂದುದನ್ನು ನೋಡಿದ ರಾಜನು ಅವನನ್ನು ಹಿಡಿದು, 'ಎಲ್ಲಿಗೆ ಹೋಗುತ್ತಿರುವೆ?' ಎಂದು ಕೇಳಿದನು. ಗುರುಗಳಿಗೆ ಮಾತು ಕೊಟ್ಟಂದಿನಿಂದ ಈ ಕಳ್ಳನೆಂದೂ ಸುಳ್ಳು ಹೇಳಿರಲಿಲ್ಲ. 'ನಾನು ರಾಜನ ಮನೆಯಲ್ಲಿ ಕಳ್ಳತನ ಮಾಡಲು ಹೋಗುತ್ತಿರುವೆ' ಎಂದು ನೇರವಾಗಿ ಉತ್ತರಿಸಿದನು. ಇವನ ಸತ್ಯದ ನುಡಿ ರಾಜನಿಗೆ ಮೆಚ್ಚಿಗೆಯಾಯಿತು. ಆಗ ಮಾರುವೇಷದಲ್ಲಿದ್ದ ರಾಜನು 'ನಾನೂ ಅರಮನೆಯಲ್ಲಿ ಕಳ್ಳತನ ಮಾಡಲೇ ಬಂದಿದ್ದೇನೆ. ಈಗ ನಾನು ಹೊರಗೆ ಯಾರೂ ಬರದಂತೆ ಕಾವಲು ಕಾಯುತ್ತಿರುತ್ತೇನೆ. ನೀನು ಅರಮನೆಯೊಳಗೆ

ಕಳ್ಳತನ ಮಾಡಿಕೊಂಡು ಬಾ. ಆದರೆ ತಂದದ್ದರಲ್ಲಿ ನನಗರ್ಧ ಕೊಡಬೇಕು' ಎಂದನು. 'ಆಗಲಿ' ಎಂದು ಕಳ್ಳನು ಅರಮನೆಯೊಳಗೆ ಹೋದನು. ಅರಮನೆಯೊಳಗೆ ಹೋದ ಕಳ್ಳನು ರಾಜನ ಪಿಠಾರಿಯನ್ನು ತೆಗೆದನು. ಅದರಲ್ಲಿ ಮೂರು ವಜ್ರದ ಉಂಗುರಗಳಿದ್ದವು. ಆ ಮೂರನ್ನೂ ತೆಗೆದುಕೊಂಡು ಹೋದರೆ, ಅವುಗಳಲ್ಲಿ ಒಂದನ್ನು ಕತ್ತರಿಸಿ ಹೊರ ಗಿರುವ ಕಳ್ಳನಿಗೆ ಕೊಡಬೇಕು. ಇದರಿಂದ ಅದರ ಸೌಂದರ್ಯ ಹಾಳಾಗುತ್ತದೆ. ಆದುದರಿಂದ ಒಂದು ಅಲ್ಲೇ ಇರಲೆಂದು ಎರಡನ್ನು ಮಾತ್ರ ತೆಗೆದು ಕೊಂಡು ಹೊರಗೆ ಬಂದನು.



ಬೆಳಗ್ಗೆ ರಾಜ ಒಡ್ಡೋಲಗ ಸೇರಿಸಿದನು. ಮಂತ್ರಿಯನ್ನು ಕರೆದು 'ರಾತ್ರಿ ಅರಮನೆಯಲ್ಲಿ ಕಳ್ಳತನವಾಗಿದೆ. ಏನೇನು ಕಳ್ಳತನವಾಗಿದೆ ನೋಡಿ ಕೊಂಡು ಬಾ' ಎಂದು ಕಳುಹಿಸಿದನು. ಮಂತ್ರಿಯು ಅರಮನೆಯನ್ನು ಪರಿಶೀಲಿಸುವಾಗ ರಾಜನ ಪಿಠಾರಿ ಬೀಗ ಮುರಿದಿರುವುದು ಕಣ್ಣಿಗೆ ಬಿತ್ತು, ಮತ್ತು ಒಂದು ವಜ್ರದ ಉಂಗುರ ಅಲ್ಲಿರುವುದು ಕಂಡುಬಂತು. ಮಂತ್ರಿ ಆ ಉಂಗುರವನ್ನು ತನ್ನ ಕಿಸೆಗೆ ಸೇರಿಸಿದನು. ರಾಜನ ಬಳಿ ಬಂದು ಮೂರು ವಜ್ರದ ಉಂಗುರಗಳು ಕಳ್ಳತನವಾಗಿವೆ ಎಂದು ಹೇಳಿದನು. ರಾಜನು, ರಾಜಭಟರನ್ನು ಕಳುಹಿಸಿ ಕಳ್ಳನನ್ನು ಆಸ್ಥಾನಕ್ಕೆ ಕರೆಸಿದನು ಮತ್ತು ರಾತ್ರಿ ನಡೆದ ಕಳ್ಳತನದ ಬಗ್ಗೆ ಕೇಳಿದನು. ಆಗ ಕಳ್ಳನು ರಾತ್ರಿ ನಡೆದ ವಿಷಯವೆಲ್ಲವನ್ನೂ ಸಭೆಗೆ ವಿವರಿಸಿ ದನು. ಮೂರು ಉಂಗುರಗಳನ್ನು ಕದ್ದು ಸುಳ್ಳು ಹೇಳು ತ್ತಿರುವೆ ಎಂದು ಮಂತ್ರಿ ಕಳ್ಳನ ಮೇಲೆ ಏರಿ ಹೋದನು. ಆಗ ರಾಜನು ತನ್ನ ಕತ್ತಿಯಿಂದ ಮಂತ್ರಿಯ ಕಿಸೆಯನ್ನು ತಿವಿಯಲಾಗಿ ಉಂಗುರ ಕೆಳಗೆ ಬಿತ್ತು. ರಾಜನು ಮಂತ್ರಿಯ ಶಿರಚ್ಛೇದ ಮಾಡಿಸಿ ಕಳ್ಳನನ್ನು ಮಂತ್ರಿ ಯನ್ನಾಗಿ ಮಾಡಿಕೊಂಡನು.

**ಇದರಿಂದ ತಿಳಿದುಬರುವುದೇನೆಂದರೆ ಮನುಷ್ಯ ಒಂದೇ ಒಂದು ಒಳ್ಳೆಯ ಗುಣವನ್ನು 'ವ್ರತ'ವಾಗಿ ಸ್ವೀಕ ರಿಸಿದರೆ, ಅದರ ಪಾಲನೆಗಾಗಿ ಉಳಿದ ಎಲ್ಲಾ ಗುಣಗಳು ಅದನ್ನು ಹಿಂಬಾಲಿಸುತ್ತವೆ. ಒಂದೇ ಒಂದು ಒಳ್ಳೆಯ ಗುಣ ಅವನನ್ನು ಉನ್ನತ ಮಟ್ಟಕ್ಕೆ ತರುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಕಲಿಯುಗದಲ್ಲಿ 'ಸತ್ಯವೇ ದೇವರು' ಎಂದು. ಕಳ್ಳ 'ಸತ್ಯ'ವನ್ನು ಪಾಲಿಸಿ ದ್ದರಿಂದ ಅವನು ಕಳ್ಳತನ ಮಾಡುತ್ತಿದ್ದರೂ ಮಂತ್ರಿ ಯಾದ. ಗಾಂಧೀಜಿ ಬಳಿ ಇದ್ದ ಆಸ್ತಿಯೆಂದರೆ ಸತ್ಯ ಒಂದೇ. ಸತ್ಯದ ನಡವಳಿಕೆಗಳಿಂದಲೇ ಬ್ರಿಟಿಷ್ ಸಾಮ್ರಾಜ್ಯವನ್ನೇ ಮಣಿಸಿದರು, ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು.**

*ಆಧಾರ: ಜಾನಪದ ಕಥೆ.*